ಹುಲಿ, ನರಿ ಮತ್ತು ಗುಹೆ

✍️ಕೌಡೂರು ನಾರಾಯಣ ಶೆಟ್ಟಿ, ಇಟೆಲಿ.



ಪಿಲ್ಲುಂಜ ಎಂಬ ಜಾಗದಲ್ಲಿ ಒಂದು ಹುಲಿ ಇತ್ತು. ಒಂದು ದಿನ ಅದಕ್ಕೆ ಎಷ್ಟೇ ಹುಡುಕಿದರೂ ತಿನ್ನಲು ಏನೂ ಸಿಗಲಿಲ್ಲ. ಸಿಗುವುದಾದರೂ ಹೇಗೆ? ಆ ಕಾಡು-ಗುಡ್ಡದಲ್ಲಿದ್ದ ಹೆಚ್ಚಿನ ಪ್ರಾಣಿಗಳನ್ನು ಅದು ಈಗಾಗಲೇ ಹಿಡಿದು ತಿಂದಿತ್ತು, ಉಳಿದ ಪ್ರಾಣಿಗಳು ಹೆದರಿ ಬೇರೆ ಕಡೆಗೆ ಹೋಗಿದ್ದವು. ಹುಲಿ ಹುಡುಕಿ ಹುಡುಕಿ ಸೋತು ಸುಣ್ಣವಾಯಿತು, ಹಸಿವಿನಿಂದ ಅದಕ್ಕೆ ಕಣ್ಣು ಕಾಣಿಸುತ್ತಿರಲಿಲ್ಲ.
ಸಂಜೆಯಾಗುತ್ತಿದ್ದಂತೆ ಆ ಪ್ರದೇಶದಲ್ಲಿದ್ದ ಒಂದು ಗುಹೆಯನ್ನು ಹೊಕ್ಕಿತು. ಒಳಗೆ ಹೋಗಿ ನೋಡಿದಾಗ ಆ ಗುಹೆಯಲ್ಲಿ ಯಾವುದೋ ಒಂದು ಪ್ರಾಣಿ ವಾಸವಾಗಿದೆ ಎಂಬುದು ಹುಲಿಗೆ ಗೊತ್ತಾಯಿತು. ಆಗ ಹುಲಿ, "ಖಂಡಿತವಾಗಿಯೂ ರಾತ್ರಿ ಮಲಗಲು ಯಾರಾದರೂ ಇಲ್ಲಿಗೆ ಬಂದೇ ಬರುತ್ತಾರೆ. ಮೂಲೆಯಲ್ಲಿ ಅಡಗಿ ಕುಳಿತುಕೊಳ್ಳುತ್ತೇನೆ" ಎಂದು ಯೋಚಿಸಿತು.
ಅದು ಒಂದು ನರಿಯ ಗುಹೆಯಾಗಿತ್ತು. ಊರಿನ ಸೌತೆಕಾಯಿ, ಹಾಗಲಕಾಯಿ ತಿಂದು, "ಇನ್ನು ಹೋಗಿ ಮಲಗೋಣ" ಎಂದು ಸಂಜೆ ಗುಹೆಯ ಹತ್ತಿರ ಬಂದ ನರಿಗೆ, ಧೂಳು ತುಂಬಿದ ನೆಲದಲ್ಲಿ ಹುಲಿಯ ಕಾಲಿನ ಹೆಜ್ಜೆ ಕಾಣಿಸಿತು. ಹೆಜ್ಜೆ ಗುಹೆಯ ಒಳಗಡೆ ಹೋದ ಗುರುತಿತ್ತು, ಹೊರಗೆ ಬಂದಿರಲಿಲ್ಲ!
ಆಗ ನರಿ ಮೆಲ್ಲಗೆ ಯೋಚಿಸಿತು: "ಬಹುಶಃ ಒಳಗೆ ಹುಲಿ ಇದೆ, ಆದರೆ ಖಚಿತಪಡಿಸಿಕೊಳ್ಳುವುದು ಹೇಗೆ? ನೋಡೋಣವೆಂದು ಒಳಗೆ ಇಣುಕಿ ನೋಡಿದರೆ, ಅದರ ಬಾಯಿಗೆ ಸಿಕ್ಕಿಬೀಳುತ್ತೇನೆ."
ಹೀಗೆ ಯೋಚಿಸಿದ ನರಿ ಗುಹೆಯ ಬಾಗಿಲಿಗೆ ಹೋಗಿ, "ಆಹಾ ಗುಹೆಯೇ, ಓಹೋ ಗುಹೆಯೇ" ಎಂದು ಕೂಗಿ ಸ್ವಲ್ಪ ಹೊತ್ತು ಸುಮ್ಮನಿತ್ತು.

ನಂತರ, "ಯಾವಾಗಲೂ ನಾನು ಹಿಂತಿರುಗಿ ಬಂದಾಗ ನನ್ನನ್ನು ಸ್ವಾಗತಿಸುತ್ತಿದ್ದೆ. 'ಬನ್ನಿ ಬನ್ನಿ, ಕುಳಿತುಕೊಳ್ಳಿ' ಎಂದು ಪ್ರೀತಿಯಿಂದ ಮಾತನಾಡಿಸುತ್ತಿದ್ದೆ. ಇವತ್ತೇಕೆ ಮಾತಿಲ್ಲ ಕಥೆಯಿಲ್ಲ? ಏನಾದರೂ ತೊಂದರೆಯಾಗಿದೆಯೇ ಅಥವಾ ಕೋಪ ಬಂದಿದೆಯೇ? ನೀನು ಮಾತನಾಡದಿದ್ದರೆ ನಾನು ಬೇರೆ ಗುಹೆಗೆ ಹೋಗುತ್ತೇನೆ" ಎಂದು ನರಿ ಹೇಳಿತು. ನರಿಯ ಮಾತನ್ನು ಕೇಳಿದ ಹುಲಿಗೆ ಗೊಂದಲವಾಯಿತು. "ಬಹುಶಃ ಈ ಗುಹೆ ಬರುವವರನ್ನು ಸ್ವಾಗತಿಸುತ್ತಿತ್ತೇನೋ! ಇಂದು ನನ್ನ ಭಯದಿಂದ ಬಾಯಿ ಮುಚ್ಚಿಕೊಂಡು ಕುಳಿತಿರಬೇಕು. ಹೆದರಿ ಹೋದಾಗ ಕೈಕಾಲು ನಡುಗುತ್ತದೆ, ಬಾಯಿ ತೆರೆಯುವುದಿಲ್ಲ. ಆದ್ದರಿಂದ ನಾನೇ ಎರಡು ಮಾತು ಮಾತನಾಡುತ್ತೇನೆ" ಎಂದು ಭಾವಿಸಿದ ಹುಲಿ:

"ಓಹೋ ಹೋ, ಬನ್ನಿ ಬನ್ನಿ ನರಿಯಣ್ಣ. ಹಾಗೆ ನಿದ್ದೆ ಗೆ ಜಾರಿದ್ದೆ, ನೀವು ಬಂದದ್ದು ತಿಳಿಯಲಿಲ್ಲ. ಬನ್ನಿ ಬನ್ನಿ!" ಎಂದು ಕೂಗಿತು.

ಹುಲಿಯ ಗರ್ಜನೆ ಗುಹೆಯಲ್ಲಿ ಪ್ರತಿಧ್ವನಿಸಿತು. ಅದನ್ನು ಕೇಳಿದ ಕಾಡಿನ ಪ್ರಾಣಿಪಕ್ಷಿಗಳು ಹೆದರಿ ಓಡಿಹೋದವು. ನರಿ ಜೋರಾಗಿ ನಗುತ್ತಾ, "ಬರುತ್ತೇನೆ ಬರುತ್ತೇನೆ ದೊಡ್ಡಣ್ಣ! ಗುಹೆ ಮಾತನಾಡುವ ಕಾಲವೇನಾದರೂ ಬಂದಿದೆಯೇ? ಈ ಕಾಡಿನಲ್ಲೇ ಹುಟ್ಟಿ ಬೆಳೆದು ವಯಸ್ಸಾಯಿತು, ಆದರೆ ಗುಹೆ ಮಾತನಾಡುವುದನ್ನು ನಾನೆಂದೂ ಕೇಳಿಲ್ಲ!" ಎಂದು ಹೇಳಿ ಅಲ್ಲಿಂದ ಓಡಿಹೋಯಿತು

.

ನೀತಿ: ಅಪಾಯದ ಸೂಚನೆ ಸಿಕ್ಕಾಗ ಅದಕ್ಕೆ ತಕ್ಕಂತೆ ಉಪಾಯವನ್ನು ಹೂಡಬೇಕು. "ಹಸಿವಿನಲ್ಲಿ ಕಣ್ಣು ಕಾಣಿಸುವುದಿಲ್ಲ" ಎನ್ನುವಂತೆ, ಅತಿಯಾದ ಆಸೆಯಲ್ಲಿ ಬುದ್ಧಿಯೂ ಕೆಲಸ ಮಾಡುವುದಿಲ್ಲ!